ಕಾರಣವನ್ನು ಕಂಡುಕೊಳ್ಳಲು ಯತ್ನಿಸಿದೆ.

ಅವಳು ಗರ್ಭಿಣಿಯಾಗಿದ್ದಳಂತೆ!

ಅವಳ ಚಾರಿತ್ರ್ಯವನ್ನು ಕಬಳಿಸಿದವರು ಯಾರು? ಅಲ್ಲಿನವರಿಗೆ ಅದು ಗೊತ್ತಿಲ್ಲ. ಕ್ರೂರಿಯಾದ ಅವಳ ಮಾವ ಹೊಡೆದು ಬಡಿದರೂ ಅವಳದನ್ನು ಹೇಳಲಿಲ್ಲವಂತೆ...

ಈಗ ಇದನ್ನು ಬರೆಯುವ ನಿಮಿಷಗಳಲ್ಲಿ ಅವಳ ಮುಖವನ್ನು ಸ್ಪಷ್ಟವಾಗಿ ಕಣ್ಮುಂದೆ ಕಾಣುತ್ತಿದ್ದೇನೆ...

ನನ್ನ ಕನಸುಗಳಲ್ಲಿ ಕತ್ತಲಾವರಿಸಿದ ರಾತ್ರಿಯ ಮರೆಯಲ್ಲಿ ಅವಳು ಒಂದು ಭಯಂಕರ ಪಿಶಾಚಿಯಾಗಿ ನನ್ನನ್ನು ಭೇಟಿಯಾಗುತ್ತಿರುತ್ತಾಳೆ. ಹೆದರಿ ನಾನು ಬೊಬ್ಬಿಟ್ಟಾಗ ಆ ರೂಪ ಕ್ರೂರವಾಗಿ ನಗುತ್ತಿರುತ್ತಿದೆ... ಶರೀರ ಬೆವರುತ್ತಿದೆ... ನನ್ನ ಪೆನ್ನು ಸರಿಯಾಗಿ ಮುಂದೆ ಸಾಗುವುದಿಲ್ಲ. ತೋಳಿಗೆ ತುಂಬಾ ಭಾರದ ಅನುಭವವಾಗುತ್ತಿದೆ.

ನನ್ನನ್ನು ಆತ್ಮಹತ್ಯೆ ಮಾಡಲು ಪ್ರೇರಿಸಿದ ಆ ಘಟನೆಯನ್ನು ಹೇಳಿ ಬಿಡುತ್ತೇನೆ.

ಇತ್ತೀಚೆಗೆ ನಮ್ಮ ಮನೆಗೆ ಒಬ್ಬಳು ಹೊಸ ಕೆಲಸದಾಳು ಬಂದಳು.

ನಾನವಳನ್ನು ಮೊದಲ ಬಾರಿ ಕಂಡುದು ಒಂದು ಪ್ರಭಾತದಲ್ಲಿ. ಕೋಣೆಯ ಬಾಗಿಲನ್ನು ಬಡಿದು ಅವಳು 'ಬೆಡ್ ಕಾಫಿ'ಯೊಡನೆ ನನ್ನ ಬಳಿಗೆ ಬಂದಳು. ಮಂಚದ ಸಮೀಪವಿರುವ ಸ್ಟೂಲಿನ ಮೇಲೆ ಕಾಫಿ ಪಾತ್ರೆ ತಾಗಿದ ಶಬ್ದ ಕೇಳಿಸಿಕೊಂಡ ನಾನು ಕಣ್ಣು ತೆರೆದು ನೋಡಿದಾಗ ಕಂಡುದು ಅವಳನ್ನು.

ಇಲ್ಲಿಗೊಬ್ಬಳು ಹೊಸ ಕೆಲಸದವಳು ಬಂದಿದ್ದಾಳೆಂದು ಹಿಂದಿನ ದಿನವೇ ಅಡುಗೆಯ ಕೃಷ್ಣ ಹೇಳಿದ್ದ. ಆಗ ನಾನು ಯೋಚಿಸಿದ್ದು ಒಬ್ಬಾಕೆ ಮುದುಕಿಯಾಗಿರಬಹುದೆಂದು. ಅವಳನ್ನು ನೇರವಾಗಿ ಕಂಡಾಗ ಆಶ್ಚರ್ಯಚಕಿತನಾದೆ. ಮಾಂಸಲವಾದ ದೇಹ... ತಾರುಣ್ಯ ತಳಿರು ಬಿಟ್ಟು ನಿಂತಿರುವ ಕೊಬ್ಬಿದ ಅವಯವಗಳು... ಅವಳ ಮುಖಕ್ಕೆ ಒಂದು ಆಕರ್ಷಣೆಯಿದೆ... ಅವಳು ಹಿಂತಿರುಗಿ ಹೋಗುವಾಗ ಅವಳುಟ್ಟ ಮಾಸಿದ ಪಂಚೆಯಲ್ಲಿ ಸುಳಿಗಳನ್ನು ನಿರ್ಮಿಸುವ ಜಘನಗಳ ಚಲನೆಯನ್ನು ನಾನು ಶ್ರದ್ಧೆಯಿಂದ ನಿಟ್ಟಿಸಿದೆ.

ಹನ್ನೊಂದು ಗಂಟೆಗೆ ಕಾಫಿ ಮತ್ತು ಉಪಹಾರಗಳೊಡನೆ ಅವಳು ಮತ್ತೆ ನನ್ನ ಕೋಣೆಯ ಒಳಗೆ ಬಂದಾಗ ನಾನವಳನ್ನು ಚೆನ್ನಾಗಿ ನೋಡಿದೆ... ಕೊಬ್ಬಿ ಉಬ್ಬಿ ನಿಂತಿರುವ ಅವಳ ಎದೆಭಾಗದಲ್ಲಿ ನನ್ನ ಕಣ್ಣುಗಳು ನೆಟ್ಟಾಗ ಅವಳೊಮ್ಮೆ ಸಂಕೋಚಪಟ್ಟಳು.

ಕಾಫಿ ಸುರಿಯುತ್ತ ನಾನು ಕೇಳಿದೆ:

'ನಿನ್ನ ಹೆಸರು?'

'ಲಕ್ಷ್ಮಿ...'

'ಯಾವಾಗ ಇಲ್ಲಿಗೆ ಬಂದುದು?'

'ನಿನ್ನೆ...'

ವಿಧೇಯತೆಯಿಂದ ತಲೆ ತಗ್ಗಿಸಿ ನಿಂತು ಪ್ರತಿಕ್ರಿಯಿಸಿದಳು. ಇನ್ನೇನು ಕೇಳಬೇಕೆಂಬುದು ಸಮಸ್ಯೆಯಾಯಿತು.

'ನಿನ್ನ ಊರು ಯಾವುದು?'

'.....'

ಅವಳು ಊರಿನ ಹೆಸರು ಹೇಳಿದಳು.

ಅವಳು ಸಂಭಾಷಣೆ ಮುಂದುವರಿಸಲು ನಿಲ್ಲದೆ ಹೊರಟು ಹೋದಳು.

ಅಲ್ಲಿಂದಲೇ ಆ ಪರಿಚಯದ ಆರಂಭ.